## ಕಥೆ

# ಉಡ




**ವಿ.ಎಂ. ಮಂಜುನಾಥ್**

ಕಲೆ: ಸಂತೋಷ್ ಸಸಿಹಿತ್ಲು


ಚನ್ನವ್ವ ತಂಬೂರಿ ಹಿಡಿದು ನಿಂತರೆ ಊರುಕೇರಿ ಮರೆತುಬಿಡುತ್ತಾಳೆ, ಚೌಡಿಕೆ ಪದ ಬಿತ್ತರಿಸುವುದರಲ್ಲಿ ನಿಸ್ಸೀಮಳು. ನದಿ, ದಿನ್ನೆ ಅಲೆಯುತ್ತಲೆಯುತ್ತ ಮಹಾರಾಷ್ಟ್ರದ ಗಡಿತನಕ ಹೋಗಿಬಂದಳು; ಅವಳ ಆವೇಶಕ್ಕೆ ನೋಡುಗರು ತತ್ತರಿಸಿಹೋಗುವರು.

ಭೀಮವ್ವ ಕೌದಿ ಹೊದ್ದುಕೊಂಡು ಬೇಟೆಗೊಲಿದ ಕುಂದಲಿಯಂತೆ ಹೆತ್ತವರ ಆಟವನ್ನು ನಿರುಕಿಸುವುದಷ್ಟೇ, ಯಾಕೋ ಪದ ಅವಳ ಮೈ ಮನಸ್ಸಿಗಿಡಿಯಲಿಲ್ಲ. ಒಮ್ಮೊಮ್ಮೆ ಚನ್ನವ್ವ ಚಿರತೆಯಂತೆ ಅವಳ ಮೈಮೇಲೇರಿ ಹೋಗುವಳು, ‘ಇನ್ನೇನ್ ಕಸ್ಬು ಹಿಡೀತೀಯ, ಯಿಂಗೆ ನದೀಲಿ ಈಜಾಡ್ಕಂಡು ಇದ್‌ಬಿಡೂ. ಒಂದಲ್ಲ ಒಂದಿನ ಮುಳ್ಗುಹೋತೀಯ!’ ಆವೊತ್ತು ಮುಂಜಾನೆ ಹೋದವಳು ನದಿಯಿಂದ ಸಂಜೆಗೆ ಹಿಂತಿರುಗಿದ್ದಳು. ಈಜು ಎಂದರೆ ಪ್ರಾಣ ಭೀಮವ್ವಳಿಗೆ. ಗಂಡಸರ ಸಮ ನದಿಗೆ ಜಿಗಿಯುವಳು. ಹುಡುಗರ ಮಧ್ಯೆಯೇ ಜೀವನ ಸವೆಸುವಳು, ಯಾರು ಏನಂದರೂ ಕಿವಿಗೆ ತಟ್ಟುವುದಿಲ್ಲ.

ಘಟಪ್ರಭಾ ನದಿ ಅಲೆಗಳು ಭೀಮವ್ವಳ ಪಾದಗಳನ್ನು ನೆನೆ ನೆನೆಸಿ ಹೆಣವಾಗಿಸುವ ಹೊತ್ತಿನಲ್ಲೇ ಟ್ರಕ್‌ನ ಹಾರನ್ ಶಬ್ದ ಇವಳನ್ನು ಧೃತಿಗೆಡಿಸಿತು. ಮೂರು ಮೈಲುಗಳಿಂದ ಹೊತ್ತು ತಂದ ಕಟ್ಟಿಗೆ ಹೊರೆಯಲ್ಲಿ ಚೇಳು ನುಸುಳಿಕೊಂಡಿರಬೇಕು, ಹಿಡಿದೆತ್ತಿ ಜಾಡಿಸಿದಳು. ಥೂ, ಹೊರೆ ಬಿಚ್ಚಿಕೊಂಡಿತು. ಅಲ್ಲಿ ಹೊರೆ ಬಿಗಿಯುವಾಗಲೇ ಏನೋ ಸಂದೇಹ. ಇನ್ನೇನು ದೋಣಿ ಬರಬಹುದು, ಸಾಬಣ್ಣ ಮಾತಿಗೆ ನಿಂತರೆ ಉಡ ಹಿಡಿದಂತೆ. ಅವನ ಕಣ್ಣುಗಳು ಚುರುಕು, ಸೇತುವೆಯ ತುದಿಯಿಂದಲೇ ಇವಳನ್ನು ಕಡೆಗಣಿಸಿ ಬಿಟ್ಟಿದ್ದ. ಬೀಡಿತುದಿ ಬಲಿಷ್ಠವಾಗಿ ರಂಜಿಕೊಳ್ಳುತ್ತಿರುವಾಗಲೇ ಟ್ರಕ್‌ನಿಂದ ಜಿಗಿದ ಅವನ ಕೂಗುಕೇಕೆ ಇವಳಿಗೆ ಕೇಳಿಸದೆ ಇರಲಿಲ್ಲ. ಭೀಮವ್ವಳ ಮನೆಗೆ ಇವನು ಅಷ್ಟೇನೂ ಪರಿಚಿತನಲ್ಲದಿದ್ದರೂ ಅಪರಿಚಿತನಂತೂ ಅಲ್ಲವೇ ಅಲ್ಲ. ರಸ್ತೆಬದಿಯಲ್ಲೇ ಕಟ್ಟಿಕೊಂಡಿರುವ ಇವಳ ಮನೆಗೆ ಇವನು ನುಗ್ಗಿದ ಕಥೆಯೂ ನೀರಸವಾದದ್ದೇ. ಆವೊತ್ತು ನಡುರಾತ್ರಿ, ಹೈದರಾಬಾದ್‌ನ ಕಡೆ ಹುರುಳಿಕಾಳು ಮೂಟೆಗಳನ್ನು ತುಂಬಿಕೊಂಡು ಹೊರಟಿದ್ದ ಇವನ ಟ್ರಕ್ಕು, ಡೀಸೆಲ್ ಪಂಪ್ ಕಳಚಿಕೊಂಡು ಇವಳ ಮನೆಬಾಗಿಲಿಗೆ ನಿಂತುಬಿಟ್ಟಿತು. ಬೀಡಿ ಸೇದಿಕೊಂಡು ಜಗುಲಿ ಮೇಲೆ ಗೊರಗುಟ್ಟುತ್ತಿದ್ದ ಯಲ್ಲಾಲಿಂಗನಿಗೆ ಸಾಬಣ್ಣನ ಅಸಹಾಯಕ ಚೀರಾಟ, ಗೊಣಗಾಟ ನಿದ್ರೆಗೆಡಿಸಿತು. ಭೀಮವ್ವಳ ತಂದೆ ಯಲ್ಲಾಲಿಂಗ ಆ ಸಂದರ್ಭದಲ್ಲಿ ಇವನಿಗೆ ಆ ರಾತ್ರಿ ತಂಗಲು ಆಶ್ರಯ ನೀಡಿ, ನಸುಕಾಗುತ್ತಿದ್ದಂತೆ ತನ್ನ ಸೈಕಲ್ಲನ್ನೂ ಇವನಿಗೆ ನೀಡಿ ಮೆಕ್ಯಾನಿಕ್‌ನನ್ನು ಕರೆತರಲು ಸಹಕರಿಸಿದ್ದ. ಅಲ್ಲಿಂದಾಚೆಗೆ ಸಾಬಣ್ಣ ಈ ರಸ್ತೆಗೆ ಬಂದಾಗಲೆಲ್ಲ ಯಲ್ಲಾಲಿಂಗನ ಮನೆಗೆ ಪುಣ್ಯಕ್ಷೇತ್ರಕ್ಕೆ ಬಂದುಹೋಗುವಂತೆ ಬಂದುಬಿಡುತ್ತಿದ್ದ, ಅದು ನಿಲ್ಲದ ವಾಡಿಕೆಯಂತಾಗಿ ಹೋಯಿತು. ಏನೇ ಲೋಡು ತಂದರೂ ಇವರ ಮನೆಗೆ ಒಂದೊಂದು ಚೀಲ ಮುಟ್ಟಿಸಿಹೋಗುತ್ತಿದ್ದ- ಕರಿಮೀನು, ಆಲೂಗಡ್ಡೆ, ಸಿಗಡಿ, ದ್ರಾಕ್ಷಿ, ಮೂಸಂಬಿ, ಹೀಗೆ ಇನ್ನು ಏನೇನೋ... ಆದರೂ ಭೀಮವ್ವಳೊಂದಿಗೆ ಅಂತಹಾ ಸಲಿಗೆಯೇನೂ ಇರಲಿಲ್ಲ. ಹೈದರಾಬಾದ್‌ನಿಂದ ಒಂದು ಜೊತೆ ಲಂಗ ದಾವಣಿ